**ಡಿ.ಡಬ್ಲೂ-01**

**ದಿನಾಂಕಃ19-01-2026 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಸಾಕ್ಷಿಯ ಪ್ರಮಾಣೀಕೃತ ಹೇಳಿಕೆಃ**

**ನಾನು ಈ ಕೆಳಕಂಡ ದಾಖಲೆಯನ್ನು ಹಾಜರುಪಡಿಸುತ್ತೇನೆ.**

ನಿಡಿ-02- ದಿ.10-07-2023ರ ಪ್ರತ್ಯುತ್ತರ ನೋಟಿಸ್

ನಿಡಿ-03- ಅಂಚೆ ರಸೀತಿ

ನಿಡಿ-04- ಅಂಚೆ ಸ್ವೀಕೃತಿ

ನಿಡಿ-05 ಮತ್ತು 6- ಅಂಚೆ ರಸೀತಿಗಳು

ನಿಡಿ-07- ಅಂಚೆ ಸ್ವೀಕೃತಿ

ನಿಡಿ-08- ದಿ.08-02-2024ರ ಪ್ರತ್ಯುತ್ತರ ನೋಟಿಸ್

ನಿಡಿ-09- ವಿಜಿಟಿಂಗ್ ಕಾರ್ಡ್

ನಿಡಿ-10- ಸ್ಟೇಟ್ ಮೆಂಟ್ ಅಪ್ ಅಕೌಂಟ್ ನ ದೃಢೀಕೃತ ನಕಲು(ಒಟ್ಟು 7 ಪುಟಗಳು)

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಕೋರಿದ್ದು, ಸಮಯ ನೀಡಲಾಯಿತು.**

**2ನೇ ಅಪರ ಸಿವಿಲ್ ಮತ್ತು ಮತ್ತು ಜೆ.ಎಂ.ಎಫ್.ಸಿ,**
**ನ್ಯಾಯಾಲಯ, ಮಾಗಡಿ**

ಸಿಸಿ **322-2020**

**ಡಿ.ಡಬ್ಲೂ -01**

**ದಿನಾಂಕಃ 07-05-2024 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಸಾಕ್ಷಿಯ ಪ್ರಮಾಣೀಕೃತ ಹೇಳಿಕೆಃ**

| | |
|---|---|
| ಹೆಸರು | **ಲೋಕೇಶ್ ಚಂದ್** |
| ತಂದೆಯ ಹೆಸರು | **ಲೇಟ್ ಮೋತಿಲಾಲ್** |
| ವಯಸ್ಸು | **63** |
| ಉದ್ಯೋಗ | **ವ್ಯಾ ವಾರ** |
| ವಿಳಾಸ | **ಬೆಂಗಳೂರು** |

1. ನಾನು ದಿ.31-03-2016 ರಂದು 5 ಎಕರೆ 14 ಗುಂಟೆ ಜಾಗವನ್ನು ಖರೀದಿ ಮಾಡಿರುತ್ತೇನೆ. ದಿ.30-03-2017 ರಂದು ಈ ಮೇಲೆ ಹೇಳಿರುವ ಆಸ್ತಿಯನ್ನು ನಾನು ನನ್ನ ಹೆಂಡತಿಗೆ ದಾನವಾಗಿ ನೀಡಿರುತ್ತೇನೆ. ಸದರಿ ಜಾಗವನ್ನು ನಾನು ರವಿಕುಮಾರ್ ರವರಿಂದ ಖರೀದಿ ಮಾಡಿರುತ್ತೇನೆ. ನಾನು ಖರೀದಿ ಮಾಡಿದ ನಂತರ ರವಿಕುಮಾರ್ ರವರು 2 ರಿಂದ 3 ಬಾರಿ ಸದರಿ ಜಾಗವನ್ನು ಕಡಿಮೆ ಬೆಲೆಗೆ ಅವರಿಗೆ ಮಾರಾಟ ಮಾಡುವಂತೆ ಕೇಳಿಕೊಂಡರು. ನಾನು ಅದಕ್ಕೆ ಒಪ್ಪಲಿಲ್ಲ. ನಾನು ಜಾಗವನ್ನು ಅವರಿಗೆ ಮಾರಾಟ ಮಾಡದೇ ಇದ್ದ ಕಾರಣದಿಂದ ನನ್ನ ಹೆಸರಿನಲ್ಲಿ ಒಂದು ಜಿ.ಪಿ.ಎ ನ್ನು ಸೃಷ್ಟಿ ಮಾಡಿದ್ದರು ಮತ್ತು ನನ್ನ ಸಹಿಯನ್ನು ಫೋರ್ಜರಿ ಮಾಡಿರುತ್ತಾರೆ. ಸದರಿ ಸೃಷ್ಟಿತ ಜಿ. ಪಿ. ಎ ಆಧಾರದ ಮೇಲೆ 48 ನಿವೇಶನಗಳನ್ನು ಮಾರಾಟ ಮಾಡಿರುತ್ತಾರೆ. ನನಗೆ ಯಾರೋ ಈ ವಿಷಯವನ್ನು ತಿಳಿಸಿದ ಮೇರೆಗೆ ನಾನು ಉಪನೊಂದಾಣಾಧಿಕಾರಿಗಳ

ಕಛೇರಿಯಲ್ಲಿ ಅರ್ಜಿಯನ್ನು ಸಲ್ಲಿಸಿ ದೃಢೀಕೃತ ದಾಖಲೆಗಳನ್ನು ಪಡೆದುಕೊಂಡೆನು. ಸದರಿ ದಾಖಲೆಯನ್ನು ನೋಡಿದಾಗ ರವಿಕುಮಾರ್ ಮತ್ತು ಡೆವಲಪ್ಪರ್ ಸಿದ್ದ

ರೂಢರವರು ಜಿ.ಪಿ.ಎ ಆಧಾರದ ಮೇಲೆ 48 ನಿವೇಶನಗಳನ್ನು ಮಾರಾಟ ಮಾಡಿರುತ್ತಾರೆ. ರವಿಕುಮಾರ್ ರವರು 28 ಗುಂಟೆ ಜಾಗಕ್ಕೆ ಸಿದ್ದರೂಢರವರ ಹೆಸರಿಗೆ ಕ್ರಯದ ಕರಾರುಪತ್ರವನ್ನು ಮಾಡಿಕೊಟ್ಟಿರುತ್ತಾರೆ. ಸದರಿ ದಾಖಲೆಗಳನ್ನು ತೆಗೆದುಕೊಂಡು ದೂರನ್ನು ನೀಡಲು ನಾನು ತಾವರೆಕೆರೆ ಪೋ. ಠಾಣೆಗೆ ಹೋಗಿರುತ್ತೇನೆ. ಆಗ ಪೋ. ಠಾಣೆಯಲ್ಲಿ ನನ್ನ ದೂರನ್ನು ಸ್ವೀಕರಿಸಿರುವುದಿಲ್ಲ ಮತ್ತು ಸದರಿ ವಿಷಯವು ಸಿವಿಲ್ ವ್ಯಾಜ್ಯದಿಂದ ಕೂಡಿರುತ್ತದೆ ಎಂದು ಹೇಳಿ ನ್ಯಾಯಾಲಯಕ್ಕೆ ಹೋಗುವಂತೆ ತಿಳಿಸಿದರು. ನಂತರ ನಾನು ನನ್ನ ವಕೀಲರ ಮೂಲಕ ಪಿ.ಸಿ.ಆರ್ ಗಳನ್ನು ನ್ಯಾಯಾಲಯದಲ್ಲಿ ಸಲ್ಲಿಸಿರುತ್ತೇನೆ. ಸದರಿ ಪಿ.ಸಿ.ಆರ್ ಆಧಾರದ ಮೇಲೆ ತಾವರೆಕೆರೆ ಪೋ. ಠಾಣೆಗೆ ವಿಚಾರಣೆ ಮಾಡಲು ನ್ಯಾಯಾಲಯವು ಆದೇಶಿಸಿರುತ್ತದೆ. ಪೋ. ಠಾಣೆಯಿಂದ ನನಗೆ ನೋಟಿಸ್ ನ್ನು ನೀಡಿ ಇನ್ಸ್ ಪೆಕ್ಟರ್ ನ್ನು ಭೇಟಿ ಮಾಡುವಂತೆ ತಿಳಿಸಿದರು. ನಾನು ನನ್ನ ಬಳಿ ಇದ್ದ ಕ್ರಯಪತ್ರ, ದಾನಪತ್ರ ಮತ್ತು ಇತರೇ ದಾಖಲೆಗಳನ್ನು ಪೋ. ಠಾಣೆಗೆ ನೀಡಿರುತ್ತೇನೆ.

2. ನಂತರ ಪೋಲೀಸರು ನನ್ನನ್ನು ನನ್ನ ಜಾಗದ ಬಳಿ ಕರೆದುಕೊಂಡು ಹೋದರು. ನಮ್ಮ ಜೊತೆ ಇಬ್ಬರು ಸಾಕ್ಷಿದಾರರುಗಳು ಇದ್ದರು. ಅಲ್ಲಿ ಮಹಜರ್ ನ್ನು ಮಾಡಿ, ಫೋಟೋಗಳನ್ನು ತೆಗೆದುಕೊಂಡರು. ನನ್ನ ಸಹಿಯನ್ನು ಖಾಲಿ ಬಿಳಿ ಹಾಳೆಯ ಮೇಲೆ ತೆಗೆದುಕೊಂಡಿರುತ್ತಾರೆ. ಪೋಲೀಸರು ನನ್ನ ಸಹಿಯನ್ನು ಪರಿಶೀಲಿಸಲು ಕಳುಹಿಸುವುದಾಗಿ ತಿಳಿಸಿದರು. ಪೋಲೀಸರು ರವಿ ಕುಮಾರ್ ಮತ್ತು ಸಿದ್ದರೂಢ ರವರಿಗೆ ಕರೆಯನ್ನು ಮಾಡಿರುತ್ತಾರೆ. ಅವರಿಬ್ಬರೂ ಸಹ ಪೋ. ಠಾಣೆಗೆ ಬಂದಿದ್ದರು. ಪೋಲೀಸರು ರವಿಕುಮಾರ್ ರವರನ್ನು ನೀವು 20 ಗುಂಟೆ ಜಾಗವನ್ನು ಸಿದ್ದರೂಢರವರಿಗೆ ಕ್ರಯದ ಕರಾರುಪತ್ರವನ್ನು ಮಾಡಿಕೊಟ್ಟಿದ್ದೀರಾ, ಆದರೆ ಯಾವ ಆಧಾರದ ಮೇಲೆ 48 ನಿವೇಶನಗಳನ್ನು ಮಾರಾಟ ಮಾಡಿದ್ದೀರಾ ಎಂದು ಪ್ರಶ್ನಿಸಿದರು. ರವಿಕುಮಾರ್ ಮತ್ತು ಸಿದ್ದರೂಢರವರು ಇನ್ಸ್ ಪೆಕ್ಟರ್ ರವರ ಬಳಿ ನನ್ನ ಜೊತೆ ರಾಜಿ ಮಾಡಿಕೊಳ್ಳುವುದಾಗಿ ತಿಳಿಸಿ ಎರಡು ದಿನಗಳ ಸಮಯವನ್ನು ಕೇಳಿಕೊಂಡರು.

3. ನನ್ನ ಜಾಗದ ಪಕ್ಕ ಸಿದ್ದರೂಢರವರು ಲೇ ಔಟ್ ನ್ನು ಮಾಡಿರುತ್ತಾರೆ. ನಾವು ಪೋ. ಠಾಣೆಯಿಂದ ಆಚೆ ಬಂದ ಮೇಲೆ ಸಿದ್ದರೂಢರವರು ನನ್ನ ಜಾಗದ

ಬದಲಿಗೆ ಅವರ ಲೇ ಔಟ್ ನಲ್ಲಿ ಇರುವ 48 ಸೈಟುಗಳನ್ನು ನೀಡುವುದಾಗಿ ತಿಳಿಸಿ ಮೂರು ತಿಂಗಳುಗಳ ಕಾಲ ಸಮಯವನ್ನು ಕೇಳಿಕೊಂಡರು. ಮೂರು ತಿಂಗಳು ಕಳೆದರೂ ಸಹ ಸಿದ್ದರೂಢರವರು ನನಗೆ ಯಾವುದೇ ರೀತಿ ಜಾಗವನ್ನು ನೀಡಿರುವುದಿಲ್ಲ. ಮೂರು ತಿಂಗಳುಗಳ ನಂತರ ಸಿದ್ದರೂಢರವರಿಗೆ ಕರೆ ಮಾಡಿ ರಾಜಿಯ ಬಗ್ಗೆ ಮಾತನಾಡಿದಾಗ ಅವರು ಪದೇ ಪದೇ ಕೇಳಬೇಡಿ ಕೇಳಿದರೆ ನಾನು ಏನೂ ಮಾಡುವುದಿಲ್ಲ ಎಂದು ಹೇಳಿ ನನಗೆ ಅವಾಚ್ಯ ಶಬ್ದಗಳಿಂದ ಬೈದರು.

4. ಈ ವಿಷಯಕ್ಕೆ ಸಂಬಂಧಿಸಿದಂತೆ ನಾನು 3 ರಿಂದ 4 ಬಾರಿ ಪೋ. ಠಾಣೆಗೆ ಹೋಗಿರುತ್ತೇನೆ. ಆದರೆ ಅವರು ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಪೋಲೀಸರು ರವಿಕುಮಾರ್ ಮತ್ತು ಸಿದ್ದರೂಢರವರ ಜೊತೆ ಸೇರಿಕೊಂಡು ನ್ಯಾಯಾಲಯಕ್ಕೆ ಬಿ ರಿಪೋರ್ಟ್ ನ್ನು ಸಲ್ಲಿಸಿರುತ್ತಾರೆ. ರವಿಕುಮಾರ್ ಮತುತ ಸಿದ್ದರೂಢರವರು ಸೇರಿಕೊಂಡು ಅವರು ಮಾರಾಟ ಮಾಡಿರುವ 48 ನಿವೇಶನಗಳ ಮಾಲೀಕರ ಜೊತೆ ನನ್ನ ವಿರುದ್ದ 48 ಪಿ. ಸಿ . ಆರ್ ಗಳನ್ನು ಸಲ್ಲಿಸಿರುತ್ತಾರೆ. ಅವರು ಸಲ್ಲಿಸಿದ ಪಿ. ಸಿ. ಆರ್ ಗಳನ್ನು ತಾವರೆಕೆರೆ ಪೋ. ಠಾಣೆಗೆ ವಿಚಾರಣೆ ಮಾಡಲು ನ್ಯಾಯಾಲಯವು ಆದೇಶ ನೀಡಿರುತ್ತದೆ. ಆಗ ನನಗೆ ಪೋ. ಠಾಣೆಯಿಂದ ನೋಟಿಸ್ ನ್ನು ನೀಡಿರುತ್ತಾರೆ. ನಾನು ಪೋ. ಠಾಣೆಗೆ ನನ್ನ ಬಳಿ ಇದ್ದ ಎಲ್ಲಾ ದಾಖಲೆಗಳನ್ನು ತೆಗೆದುಕೊಂಡು ಹೋಗಿದ್ದೇನು. ನಾನು ಪೋಲೀಸರಿಗೆ ನಾನು ಖರೀದಿ ಮಾಡಿರುವ ಜಾಗವನ್ನು ರವಿಕುಮಾರ್ ಮತುತ ಸಿದ್ದರೂಢರವರು ನನ್ನ ಹೆಸರಿನಲ್ಲಿ ಮಾಡಿಕೊಂಡಿದ್ದ ಸೃಷ್ಟಿತ ಜಿ. ಪಿ. ಎ ಆಧಾರದ ಮೇಲೆ ಮಾರಾಟ ಮಾಡಿದ್ದಾರೆ ಎಂದು ತಿಳಿಸಿದ್ದರೂ ಸಹ ಪೋಲೀಸರು ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ.

5. ರವಿಕುಮಾರ್ ಮತ್ತು ಸಿದ್ದರೂಢರವರು ವರ್ತೂರು ಗ್ರಾಮದವರು. ರವಿಕುಮರ್ ಮತುತ ಸಿದ್ದರೂಢರವರು ತಾವರೆಕೆರೆ ಪೋ. ಠಾಣೆಯಿಂದ 2 ಕಿ. ಮೀ. ನ ಅಂತರದಲ್ಲಿ ವಾಸಿಸುತ್ತಿದ್ದಾರೆ. ಈ ಮೇಲೆ ಹೇಳಿರುವ 48 ಜನರು ಸಲ್ಲಿಸಿದ್ದ ಪಿ.ಸಿ. ಆರ್ ಗಳನಂತೆ ಪೋಲೀಸರು ನನ್ನ ವಿರುದ್ದ ಚಾರ್ಜ್ ಶೀಟ್ ನ್ನು ಸಲ್ಲಿಸಿದ್ದರು. ಸದರಿ ಚಾರ್ಜ್ ಶೀಟ್ ಗಳನ್ನು ಪ್ರಶ್ನಿಸಿ ನಾನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆಯನ್ನು ಪಡೆದುಕೊಂಡಿರುತ್ತೇನೆ ಮತ್ತು ಸದರಿ ಪಿಟಿಶನ್ ಗಳು ಚಾಲ್ತಿಯಲ್ಲಿ

ಇರುತ್ತದೆ. ನಾನು ಮಾಗಡಿಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಈ ಮೇಲೆ ಹೇಳಿರುವ ನನ್ನ ಜಾಗಕ್ಕೆ ಸಂಬಂಧಿಸಿದಂತೆ ಮಾಲೀಕತ್ವವನ್ನು ಕೋರಿ ದಾವೆಯನ್ನು ಸಲ್ಲಿಸಿರುತ್ತೇನೆ. ಇದೆಲ್ಲಾ ಆದ ನಂತರ ನಾನು ರವಿಕುಮಾರ್ ರವರ ಮನೆಗೆ ಒಂದು ಬಾರಿ ಹೋಗಿದ್ದೇನು. ನಾನು ಆ ಸಮಯದಲ್ಲಿ ರವಿಕುಮಾರ್ ರವರನ್ನು ರಾಜಿ ಮಾಡಿಕೊಳ್ಳುವಂತೆ ಕೇಳಿಕೊಂಡಾಗ ನನ್ನ ಕೈ ಮತ್ತು ಕಾಲುಗಳನ್ನು ಮುರಿಯುವುದಾಗಿ ತಿಳಿಸಿ ಅವಾಚ್ಯ ಶಬ್ದಗಳಿಂದ ಬೈದರು.

6. ನಂತರ ನಾನು ತಾವರೆಕೆರೆಯ ಡಿ.ವೈ.ಎಸ್.ಪಿ ರವರ ಬಳಿ ಹೋಗಿ ಸದರಿ ವಿಷಯವನ್ನು ತಿಳಿಸಿ, ದಾಖಲೆಗಳನ್ನು ನೀಡಿರುತ್ತೇನೆ. ನಾನು ದಾಖಲೆಗಳನ್ನು ರಾಮನಗರದ ಎ.ಸಿ.ಪಿ ಯವರಿಗೂ ಸಹ ನೀಡಿರುತ್ತೇನೆ. ಡಿ.ವೈ.ಎಸ್.ಪಿ ರವರು ನನ್ನ ಬಳಿ ಖಾಲಿ ಬಿಳಿಯ ಹಾಳೆಯ ಮೇಲೆ ಸಹಿಯನ್ನು ಪಡೆದುಕೊಂಡು ನನ್ನ ಸಹಿಯನ್ನು ಪರಿಶೀಲಿಸಲು ಕಳುಹಿಸುವುದಾಗಿ ತಿಳಿಸಿದರು. ಒಂದು ವಾರದ ನಂತರ ಎಫ್.ಎಸ್. ಎಲ್ ನಿಂದ ವರದಿ ಬಂದಿರುತ್ತದೆ. ಸದರಿ ವರದಿಯಂತೆ ನನ್ನ ಸಹಿಯನ್ನು ರವಿಕುಮಾರ್ ಮತ್ತು ಸಿದ್ದರೂಢರವರು ಪೋರ್ಜರಿ ಮಾಡಿರುವುದಾಗಿ ತಿಳಿಸಿರುತ್ತಾರೆ. ರವಿಕುಮಾರ್ ಮತ್ತು ಸಿದ್ದರೂಢರವರ ಮೇಲೆ ಮಾಗಡಿ ನ್ಯಾಯಾಲಯದಲ್ಲಿ ಎರಡು ಕ್ರಿಮಿನಲ್ ಪ್ರಕರಣಗಳು ನಡೆಯುತ್ತಿದೆ. ಡಿ. ವೈ. ಎಸ್. ಪಿಯವರು ಈ ಮೇಲೆ ಹೇಳಿರುವ ಕ್ರಿಮಿನಲ್ ಪ್ರಕರಣಗಳಲ್ಲಿ ಎಫ್.ಎಸ್. ಎಲ್ ವರದಿಯನ್ನು ಸಲ್ಲಿಸಿರುವುದಾಗಿ ತಿಳಿ ಸಿ ನಾನು ಅದರ ದೃಢಿಕೃತ ನಕಲನ್ನು ಪಡೆದುಕೊಳ್ಳುವಂತೆ ತಿಳಿಸಿದರು. ನಾನು ಅದರಂತೆ ದೃಢೀಕೃತ ನಕಲನ್ನು ಪಡೆದುಕೊಂಡಿರುತ್ತೇನೆ. ರವಿಕುಮಾರ್ ಮತ್ತು ಸಿದ್ದರೂಢರವರಿಗೆ ಎಫ್.ಎಸ್. ಎಲ್ ವರದಿಯ ಬಗ್ಗೆ ತಿಳಿದ ನಂತರ ನನಗೆ ಕರೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದರು. ನನಗೆ ಎಲ್ಲೂ ನ್ಯಾಯ ಸಿಗದ ಕಾರಣ ನ್ಯಾಯಾಲಯಕ್ಕೆ ಬಂದಿರುತ್ತೇನೆ.

**ಈ ಹಂತದಲ್ಲಿ ದಾಖಲೆಗಳನ್ನು ಹಾಜರುಪಡಿಸಿ ಗುರುತಿಸಿಕೊಳ್ಳಲು ಸಮಯಕೋರಿದ್ದು, ಸಮಯ ನೀಡಲಾಯಿತು.**

**2ನೇ ಅಪರ ಸಿವಿಲ್ ಮತ್ತು ಮತ್ತು ಜೆ.ಎಂ.ಎಫ್.ಸಿ,**
**ನ್ಯಾಯಾಲಯ, ಮಾಗಡಿ.**

**ಪಿ.ಸಿ.ಆರ್. ः**

**ಪಿ.ಡಬ್ಲ್ಯೂ ः 01**

**ದಿನಾಂಕ ः 03-08-2023 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ನಾನು ನನ್ನ ಸತ್ಯಾಪಣೆ ಪ್ರಮಾಣಪತ್ರವನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಿದ್ದು, ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು ಹಾಗೂ ಅದರಲ್ಲಿ ತನ್ನ ಸಹಿ ಇದೆ ಎಂದು ಪ್ರಮಾಣೀಕರಿಸಿರುತ್ತೇನೆ.

**ಮುಖ್ಯ ವಿಚಾರಣೆ ः- ಫಿರ್ಯಾದುದಾರರ** ಪರ **ಶ್ರೀ.** ವಕೀಲರಿಂದ ः-

| | |
|---|---|
| ಹೆಸರು | |
| ತಂದೆಯ ಹೆಸರು | |
| ವಯಸ್ಸು | |
| ಉದ್ಯೋಗ | **ವ್ಯವಸಾಯ ಮತ್ತು ವ್ಯಾಪಾರಿ** |
| ವಿಳಾಸ | **ಮಾಗಡಿ** |

**ನಿಪಿ-01** ः ಚೆಕ್ ಸಂಖ್ಯೆಃ 125463 ಕ್ಕೆ ಸಂಬಂಧಿಸಿದ ದಿಃ 10-02-2021 ರ ಚೆಕ್ಕು

**ನಿಪಿ-02** ः ದಿನಾಂಕಃ 15-02-2021 ರ ಬ್ಯಾಂಕ್ ಹಿಂಬರಹ

**ನಿಪಿ-03** ः ದಿನಾಂಕಃ 10-02-2021ರಂದು ವಕೀಲರ ಮೂಲಕ ಆರೋಪಿಗೆ ಕಳುಹಿಸಿದ ಕಾನೂನು ಬದ್ದ ನೋಟಿಸ್ ನ ಕಛೇರಿ ಪ್ರತಿ

**ನಿಪಿ-04** ः ಅಂಚೆ ಸ್ವೀಕೃತಿ

**ನಿಪಿ-05** ः ಅಂಚೆ ಹಿಂಬರಹ

**ನಿಪಿ-06** ः ತೆರೆಯದ ನೊಂದಾಯಿತ ಅಂಚೆ ಲಕೋಟೆಯನ್ನು ಈ ಹಂತದಲ್ಲಿ ವಕೀಲರ ಸಮ್ಮುಖದಲ್ಲಿ ನಿಪಿ-06 ನ್ನು ತೆರೆದು ನೋಡಲಾಗಿ ಅದರಲ್ಲಿರುವ ನೋಟಿಸನ್ನು ನಿಪಿ-06(ಎ) ಎಂದು ಗುರುತಿಸಲಾಯಿತು.

**ಆಪಾದಿತನ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.**

**2ನೇ ಅಪರ ಸಿವಿಲ್ ಮತ್ತು ಮತ್ತು ಜೆ.ಎಂ.ಎಫ್.ಸಿ,**
**ನ್ಯಾಯಾಲಯ, ಮಾಗಡಿ.**

ಸದರಿ ದಾಖಲೆಗಳನ್ನು ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ.65-ಬಿ ಅಡಿಯಲ್ಲಿ ಪ್ರಮಾಣಪತ್ರದೊಂದಿಗೆ ಗುರುತಿಸಲಾಯಿತು.

ಪಿರ್ಯಾದುದಾರರು ಸತ್ಯಾಪಣೆ ಪ್ರಮಾಣಪತ್ರವನ್ನು ಹಾಜರು ಪಡಿಸಿ, ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆಂದು ಹಾಗೂ ಅದರಲ್ಲಿ ತನ್ನ ಸಹಿ ಇರುತ್ತದೆಂದು ಪ್ರಮಾಣೀಕರಿಸಿರುತ್ತಾರೆ.